ಕರ್ನಾಟಕ ಸರ್ಕಾರ
**ಮಕ್ಕಳ ರಕ್ಷಣಾ ನಿರ್ದೇಶನಾಲಯ, ಮೂರನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ,**
**ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001, ಕರ್ನಾಟಕ**

**E-mail ID: icps.kar@gmail.com** **Ph.No.080-22867383**

ಸಂಖ್ಯೆ:ಕೆಎಸ್ಐಸಿಪಿಎಸ್/ಮರ/ಸುತ್ತೋಲೆ-54/2018-19(ಭಾಗ-2) ದಿನಾಂಕ:16.10.2021

**ಸುತ್ತೋಲೆ**

ವಿಷಯ: ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಲು ಅನುಮತಿ ನೀಡುವ ಕುರಿತು.

ಉಲ್ಲೇಖ: ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015 ಹಾಗೂ ಮಾದರಿ ನಿಯಮಗಳು 2016.

* * * * * * *

ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಸಂಶೋಧನೆ ಹಾಗೂ ಅಧ್ಯಯನಗಳಿಗಾಗಿ ಖುದ್ದಾಗಿ ಭೇಟಿ ಮಾಡಲು ಕೋರಿ ನಿರ್ದೇಶನಾಲಯಕ್ಕೆ ಮನವಿ/ಪತ್ರಗಳು ಸ್ವೀಕೃತವಾಗಿರುತ್ತವೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಸಹಾ ನಿರ್ದೇಶನಾಲಯಕ್ಕೆ ಅನುಮತಿ ಕೋರಿ ಪತ್ರ ಬರೆಯುತ್ತಿರುವುದನ್ನು ಗಮನಿಸಲಾಗಿದೆ.

ಆದರೇ ಈ ಸಂಬಂಧ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 ರ ನಿಯಮ 78 (1)ರಲ್ಲಿ ಈ ರೀತಿ ಹೇಳಲಾಗಿದೆ **"All Child Care Institutions shall be open to visitors with the permission of the Board or the Committee or the Person-in-Charge, who may allow voluntary organisations, social workers, researchers, doctors, academicians, and such other persons as the Management Committee may permit or consider appropriate keeping in view the security, welfare and the interest of the children."**.

ಈ ಮೇಲಿನ ನಿಯಮ ಪ್ರಕ್ಕಾರ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳ ಪ್ರಭಾರ ವಹಿಸಿಕೊಂಡಿರುವ ಅಧಿಕಾರಿಗಳಿಗೆ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡುವ ಸಂಘಗಳ ಹಾಗೂ ವ್ಯಕ್ತಿಗಳ ಸಂದರ್ಶನಕ್ಕೆ ಅನುಮತಿ ನೀಡುವ ಅಧಿಕಾರವಿರುವುದರಿಂದ ಮಕ್ಕಳ ಹಿತದೃಷ್ಠಿಯಿಂದ ಹಾಗೂ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015 ಮತ್ತು ಮಾದರಿ ನಿಯಮಗಳು 2016 ಗಳನ್ನು ಗಮನದಲ್ಲಿರಿಸಿ **ಸೂಕ್ತ ನಿರ್ಧಾರಗಳನ್ನು ಜಿಲ್ಲಾ ಮಟ್ಟದಲ್ಲಿಯೇ ಕೈಗೊಳ್ಳಲು ಸೂಚಿಸಿದೆ.**

ಈ ಕುರಿತು ಕೆಳಕಂಡ ಷರತ್ತು ಮತ್ತು ನಿಬಂಧನೆಗಳನುಸಾರ ಕ್ರಮ ವಹಿಸಲು ಸೂಚಿಸಿದೆ.

**ಷರತ್ತು ಮತ್ತು ನಿಬಂಧನೆಗಳು:**

- ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015ರ ಸೆಕ್ಷನ್ 74 (1) (Prohibition on disclosure of identity of children)-ರ ಪ್ರಕಾರ ಯಾವುದೇ ವೃತ್ತ ಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ ಅಥವಾ ದೃಶ್ಯಶ್ರವಣ ಮಾಧ್ಯಮಗಳಲ್ಲಿ ಅಥವಾ ಸಾಮಾಜಿಕ ಜಾಲತಾಣಗಳಲ್ಲಿ ಅಥವಾ ಸಂವಹನದ ಇನ್ನಿತರ ವಿಧಗಳಲ್ಲಿ ಯಾವುದೇ ವಿಚಾರಣೆ ಅಥವಾ ತನಿಖೆ ಅಥವಾ ನ್ಯಾಯಿಕ ನಡವಳಿಗಳ ಕುರಿತಂತೆ ಕಾಯ್ದೆಯೊಂದಿಗೆ ಸಂಘರ್ಷದಲ್ಲಿರುವಂತಹ ಮಗುವಿನ ಅಥವಾ

2......

ಪಾಲನೆ ಮತ್ತು ಸಂರಕ್ಷಣೆಯ ಅಗತ್ಯವಿರುವಂತಹ ಮಗುವಿನ ಅಥವಾ ಸಂತ್ರಸ್ತ ಮಗುವಿನ ಅಥವಾ ಯಾವುದೇ ಅಪರಾಧದ ಸಂಬಂಧ ಸಾಕ್ಷಿಯಾಗಿರುವಂತಹ ಮಗುವಿನ ಗುರುತನ್ನು ತಿಳಿಸಬಹುದಾದ ಹೆಸರು, ವಿಳಾಸ ಅಥವಾ ಶಾಲೆ ಅಥವಾ ಇತರ ವಿವರಗಳನ್ನು ಅಥವಾ ಮಗುವಿನ ಭಾವಚಿತ್ರವನ್ನು ಪ್ರಕಟಿಸತಕ್ಕದ್ದಲ್ಲ.

- ಸಂಸ್ಥೆಗೆ ಭೇಟಿ ನೀಡುವವರ ಪೂರ್ವಪರ ವಿವರಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಹಾಗೂ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಿಗೆ ನೀಡುವುದು.
- ಭೇಟಿಯ ಸಂದರ್ಭದಲ್ಲಿ **ಆಹಾರ ಪದಾರ್ಥಗಳು, ಮೊಬೈಲ್ ಫೋನ್‌ಗಳನ್ನು ಮಕ್ಕಳಿಗೆ ನೀಡಬಾರದು** ಹಾಗೂ ಮಕ್ಕಳ ಫೋಟೋ ತೆಗೆಯಬಾರದು.
- ಸಂಸ್ಥೆಗಳಲ್ಲಿ ಚಟುವಟಿಕೆ ನಡೆಸುವ ಸಮಯದಲ್ಲಿ ಏನಾದರೂ ನಿರ್ಧಾರ ಅಥವಾ ಕಾರ್ಯಕ್ರಮ ಕೈಗೊಳ್ಳುವ ಮೊದಲು ಸಂಸ್ಥೆಯ ಅಧೀಕ್ಷಕರ ಗಮನಕ್ಕೆ ತಪ್ಪದೇ ತರುವುದು.
- ಮಕ್ಕಳ ಪಾಲನಾ ಸಂಸ್ಥೆಯ ಪ್ರಭಾರದಲ್ಲಿದ್ದ ಅಧಿಕಾರಿ, ಸಂದರ್ಶಕರ ಷರ ಬರೆಯವ ಬಗ್ಗೆ ಸಂದರ್ಶಕರ ಪುಸ್ತಕ ಇಡತಕ್ಕದು.
- ಮಕ್ಕಳ ಪಾಲನಾ ಸಂಸ್ಥೆಯ ಪ್ರಭಾರದಲ್ಲಿದ್ದ ಅಧಿಕಾರಿ/ ವ್ಯಕ್ತಿ ಸಂದರ್ಶನ ಸಂದರ್ಶಕರಿಗೆ ಮಕ್ಕಳ ಘನತೆ / ಪ್ರತಿಷ್ಠೆ ಕಾಪಾಡುವಂತೆ ಸೂಚಿಸತಕ್ಕದ್ದು.
- ಕರೋನಾ ವೈರಸ್ (ಕೋವಿಡ್–19) ನ ಮುಂಜಾಗ್ರತಾ ಕ್ರಮಗಳನ್ನು ಕಡ್ಡಾಯವಾಗಿ ಕೈಗೊಳ್ಳುವುದು.

16.10.2021

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು.

**ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:-**

1. ಎಲ್ಲಾ ಜಿಲ್ಲೆಯ ಬಾಲನ್ಯಾಯ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ
2. ಎಲ್ಲಾ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ
3. ಎಲ್ಲಾ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ
4. ಶಾಖಾ ರಕ್ಷಣಾ ಕಡತ/ಕಛೇರಿ ಪ್ರತಿ.